ಕರ್ನಾಟಕ ಸರ್ಕಾರ ಸಿಆರ್‌ಪಿ.67

ಹೇಳಿಕೆ ಹಾಳೆ
ಆರ್‌ಪಿ.ಸಂ.57
ನಮೂನೆ ಸಂ.4
(ಸಿವಿಲ್)

**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, (ಎಂ.ಎ.ಸಿ.ಟಿ.) ಕುಂದಾಪುರ.**

**ಎಂ. ವಿ. ಸಿ. ಸಂಖ್ಯೆಃ 416/21 ಪಿ ಡಬ್ಲ್ಯೂಃ2**

| | | |
|---|---|---|
| **ಸಾಕ್ಷಿದಾರರ ಹೆಸರು** | ಃ | ಡಾಃ ದಿನೇಶ್ ಕುಮಾರ್ ಶೆಟ್ಟಿ |
| **ತಂದೆ ಹೆಸರು** | ಃ | ಜಗನ್ನಾಥ ಶೆಟ್ಟಿ |
| **ವಯಸ್ಸು** | ಃ | 58 |
| **ವೃತ್ತಿ** | ಃ | ಮೂಳೆ ತಜ್ಞರು, ಚಿನ್ಮಯಿ ಆಸ್ಪತ್ರೆ ಕುಂದಾಪುರ |
| **ವಾಸ** | ಃ | ಕುಂದಾಪುರ |

**ದಿಃ 10-09-2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ-** ಅರ್ಜಿದಾರ ಪರ ವಕೀಲರಾದ ಶ್ರೀ ಕೆ ಪಿ ಎಸ್ ರವರಿಂದ

ನಾನು ಈ ಪ್ರಕರಣದಲ್ಲಿ ನನ್ನ ಮುಖ್ಯ ವಿಚಾರಣೆಯ ಭಾಗವಾಗಿ ಈ ದಿನ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿಯ ಸಂಗತಿಗಳು ಸತ್ಯವಾಗಿವೆ.

ನಾನು ಈ ದಿನ ಗಾಯಾಳು ತಿಮ್ಮಪ್ಪ ನಾಯ್ಕ ರವರ ಅಂಗನ್ಯೂನ್ಯತಾ ಪ್ರಮಾಣ ಪತ್ರ ಹಾಜರುಪಡಿಸುತ್ತಿದ್ದು, ಅದನ್ನು ನಿಪಿ-13 ಎಂದೂ ಅದರಲ್ಲಿರುವ ನನ್ನ ಸಹಿಯನ್ನು ನಿಪಿ-13ಎ ಎಂದು ಗುರುತಿಸಲಾಯಿತು. ಹಾಗೂ ಗಾಯಾಳುವಿನ ವೈದ್ಯಕೀಯ ಕಡತ ಹಾಜರುಪಡಿಸುತ್ತಿದ್ದು, ಅದನ್ನು ನಿಪಿ-14 ಎಂದೂ ಮತ್ತು ಒಟ್ಟು 5 ಎಕ್ಸರೇ ಫಿಲಂ ಹಾಜರುಪಡಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-15 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** 2ನೇ ಎದುರುದಾರ ಪರ ವಕೀಲರಾದ ಶ್ರೀ ಕೆ ಕೆ ಎಸ್ ರವರಿಂದ

ಗಾಯಾಳು ಒಂದು ಬಾರಿಗೆ ನಮ್ಮ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದ ಎಂದರೆ ಸರಿ. ಅವನ ಬೆನ್ನು ಮೂಳೆಗೆ ಆದಂತಹಾ ಗಾಯಕ್ಕೆ ಸಾಂಪ್ರದಾಯಿಕ ಚಿಕಿತ್ಸೆ ನೀಡಲಾಗಿದೆ. ಬೆನ್ನು ಮೂಳೆ ಗಾಯವು ವಿಶ್ರಾಂತಿಯಿಂದ ಕಡಿಮೆ ಆಗುತ್ತಿತ್ತು ಎಂದರೆ ಸಾಕ್ಷಿ ಸದ್ರಿ ಗಾಯವು ದೀರ್ಘ ಕಾಲದ ವಿಶ್ರಾಂತಿ ಮಾಡಿದರೆ ಮಾತ್ರ ಗುಣವಾಗುವ ಸಾಧ್ಯತೆ ಇತ್ತು ಅಂತ ಸಾಕ್ಷಿ ನುಡಿಯುತ್ತಾರೆ.

ಗಾಯಾಳುವಿಗೆ ವ್ಯಾಯಾಮ ಚಿಕಿತ್ಸೆ ಹೇಳಿಕೊಟ್ಟಿದ್ದೇನೆ. ಗಾಯಾಳು ಏನು ಕೆಲಸ ಮಾಡುತ್ತಾನೆ ಎನ್ನುವ ಮೇರೆಗೆ ನನಗೆ ವೈಯುಕ್ತಿಕ ಮಾಹಿತಿ ಇಲ್ಲಾ. ಗಾಯಾಳು ಕೂಲಿ ಅಂತ ಮಾಹಿತಿ ನೀಡಿದ್ದು ಆ ಪ್ರಕಾರ ಕಡತಗಳಲ್ಲಿ ದಾಖಲಾಗಿದೆ. ಮೂಳೆಗಳು ಸರಿಯಾಗಿ ಜೋಡಣೆಯಾಗಿದೆ ಎಂದರೆ ಬೆನ್ನು ಮೂಳೆ ಮುರಿದಂತಹಾ ಸ್ಥಿತಿಯಲ್ಲೇ ಜೋಡಣೆ ಆಗಿದೆ ಅಂತ ನುಡಿಯುತ್ತಾರೆ. ಗಾಯಾಳು ನಮ್ಮ ಆಸ್ಪತ್ರೆಯಿಂದ ಬಿಡುಗಡೆ ಆದ ನಂತರ ನ್ಯೂನ್ಯತಾ ಪ್ರಮಾಣ ಪತ್ರ ಪಡೆದಿದ್ದು **4** ವರ್ಷಗಳ ನಂತರ. ನಾನು ನೀಡಿದ ಅಂಗನ್ಯೂನ್ಯತೆ ಇಡೀ ದೇಹಕ್ಕೆ ಸಂಬಂಧಪಟ್ಟದ್ದು ಆಗಿರುವುದಿಲ್ಲ ಎಂದರೆ ಸಾಕ್ಷಿ ಗಾಯಾಳುವಿನ ಸ್ಪೈನಲ್ ಕಾಡ್ ಗೆ ಆದಂತಹಾ ಅಂಗನ್ಯೂನ್ಯತೆ ಇಡೀ ದೇಹಕ್ಕೆ ಹೋಲಿಸಿ ನೀಡಿದ್ದು ಅಂತ ನುಡಿಯುತ್ತಾರೆ. ಮತ್ತು ಕಾಲಿಗೆ ನೀಡಿದ ನ್ಯೂನ್ಯತೆ ಅದು ಕೇವಲ ಕಾಲಿಗೆ ಸಂಬಂಧಪಟ್ಟಿದ್ದು. ನಿಪಿ-**13** ರಲ್ಲಿ ಕಾಣಿಸಿದಷ್ಟು ಅಂಗನ್ಯೂನ್ಯತೆ ಗಾಯಾಳುವಿಗೆ ಆಗದಿದ್ದರೂ ಸಹಾ ಉತ್ಪ್ರೇಕ್ಷೆಯಾಗಿ ನಾನು ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯೂನ್ಯತಾ ಪ್ರಮಾಣ ಪತ್ರ ನೀಡಿ ಅದಕ್ಕೆ ಪೂರಕವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ. ಗಾಯಾಳುವಿಗೆ ಅಳವಡಿಸಿದ ಒಳ ಸಾಧನ ತೆಗೆಯಲು ನ್ಯೂನ್ಯತಾ ಪ್ರಮಾಣ ಪತ್ರದಲ್ಲಿ ಕಾಣಿಸಿದಷ್ಟು ರೂ:**45,000-00** ಖರ್ಚು ಆಗುವುದಿಲ್ಲ ಎಂದರೆ ಸರಿ ಅಲ್ಲಾ. ಗಾಯಾಳು ಸಂಪೂರ್ಣವಾಗಿ ಗುಣಮುಖನಾಗಿದ್ದು, ಅವನಿಗೆ ನಿಪಿ-**13** ರಲ್ಲಿ ಕಾಣಿಸಿದಷ್ಟು ನ್ಯೂನ್ಯತೆ ಈಗ ಇರುವುದಿಲ್ಲ ಎಂದರೆ ಸರಿ ಅಲ್ಲಾ.

**ಮರು ವಿಚಾರಣೆ:** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**(ಎಂ.ಎ.ಸಿ.ಟಿ.) ಕುಂದಾಪುರ**